

ಕ್ವಾರಂಟೈನ್ ನಂತರ ಮಗಳನ್ನು ಸೇರಿದ ಖುಷಿಯಲ್ಲಿ ಬೆಳಗಾವಿಯ ನರ್ಸ್ ಸುನಂದಾ.

# ನೋವು ಸಾವು ಮೆಚ್ಚುಗೆ

ಬೆಳಗಾವಿಯ ಶುಶ್ರೂಷಕಿ ಸುನಂದಾ ಅವರ ಸೇವಾ ಮನೋಭಾವವನ್ನು ಮೆಚ್ಚಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಫೋನ್ ಮಾಡಿ ಅಭಿನಂದಿಸಿದ್ದರು. ಬೆಳಗಾವಿ ಜಿಲ್ಲೆಯ ಬಿಮ್ಸ್ ಆಸ್ಪತ್ರೆಯಲ್ಲಿ ನರ್ಸ್ ಆಗಿ ಸೇವೆ ಸಲ್ಲಿಸುತ್ತಿರುವ ಸುನಂದಾ, ಕೊರೊನಾ ಸೋಂಕಿತರ ಉಪಚಾರದಲ್ಲಿ ತೊಡಗಿಕೊಂಡಿರುವುದರಿಂದ ಕುಟುಂಬದಿಂದ ದೂರವುಳಿದಿದ್ದರು. ತಮ್ಮನ್ನು ನೋಡಲು ಪುಟ್ಟ ಮಗಳೊಂದಿಗೆ ಬಂದ ಪತಿಯನ್ನು ನೋಡಿ, ಅವರ ಬಳಿ ಹೋಗಿ ಮಾತನಾಡಲಾಗದೆ ಕಣ್ಣೀರು ಸುರಿಸುತ್ತಾ ನಿಂತ ಸುನಂದಾ ಅವರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ, ಜನರ ಮನಸ್ಸನ್ನು ಕಲಕಿತ್ತು. 'ಅಮ್ಮಾ ಬಾ ಬಾ' ಎನ್ನುವ ಪುಟಾಣಿಯ ಕರೆ ದಾದಿಯರ ಕೌಟುಂಬಿಕ ಜೀವನದ ಸಂಕಷ್ಟಗಳ ಕಥೆ ಹೇಳುವಂತಿತ್ತು. ಆ ವಿಡಿಯೊ ನೋಡಿದ ಮುಖ್ಯಮಂತ್ರಿಗಳು ಸುನಂದಾ ಅವರಿಗೆ ಫೋನ್ ಮಾಡಿ ಸಾಂತ್ವನ ಹೇಳಿದ್ದರು.

ದಾವಣಗೆರೆಯ ದಾದಿಯೊಬ್ಬರು ಕಳೆದ ವಾರವಷ್ಟೇ ಕೋವಿಡ್ 19 ಸೋಂಕಿಗೆ ಒಳಗಾಗಿದ್ದಾರೆ. ಹೀಗೆ ಸಾವು ನೋವುಗಳ ಉದಾಹರಣೆ ಸಾಕಷ್ಟಿದ್ದರೂ ದಾದಿಯರು ಕಂಗೆಡದೆ ಸಂತ್ರಸ್ತರ ಉಪಚಾರದಲ್ಲಿ ತೊಡಗಿದ್ದಾರೆ. ಆ ಕಾರಣದಿಂದಲೇ ಅವರು ಸಮಾಜದ ಪಾಲಿನ ಅಮ್ಮಂದಿರು.

ಬ್ರಿಟನ್‌ನ ವಲ್ಸಲ್ ಮ್ಯಾನರ್ ಆಸ್ಪತ್ರೆಯಲ್ಲಿ ದಾದಿಯಾಗಿ ಸೇವೆ ಸಲ್ಲಿಸುತ್ತಿದ್ದ ಅರೀಮ್ ನಸ್ರೀನ್, ಕೊರೊನಾ ಸೋಂಕಿಗೆ ಬಲಿಯಾದ ಮೊದಲ ಶುಶ್ರೂಷಕಿ. 36 ವರ್ಷ ವಯಸ್ಸಿನ ನಸ್ರೀನ್ ಪಾಕಿಸ್ತಾನ ಮೂಲದವರು. ಸೇವಾ ಮನೋಭಾವ ಹೊಂದಿದ್ದ ಆಕೆ, ಬ್ರಿಟನ್‌ನಲ್ಲಿ ವ್ಯಾಪಕವಾಗಿರುವ ಕೋವಿಡ್ 19 ಸೋಂಕಿಗೊಳಗಾದ ರೋಗಿಗಳ ಶುಶ್ರೂಷೆಯಲ್ಲಿ ಹಗಲಿರುಳು ತೊಡಗಿಕೊಂಡಿದ್ದರು. ಆ ಸೇವೆಯಲ್ಲೇ ಸೋಂಕಿಗೊಳಗಾದ ನಸ್ರೀನ್ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದರು. ಅವರ ಮೂವರು ಮಕ್ಕಳಿಗೀಗ ಅಮ್ಮನಿಲ್ಲ.

ಮಾತುಗಳೂ ಹೌದು.

ಚೇತನಾ ಅವರೊಂದಿಗೆ ಕೆಲಸ ಮಾಡುವ ಸ್ಟಾಫ್ ನರ್ಸ್ ಆಗಿರುವ ಮಹಾಲಕ್ಷ್ಮಿ ಸಿಸ್ಟರ್ ಕೂಡ ಕೋವಿಡ್ ಸೋಂಕಿತರ ಶುಶ್ರೂಷೆಯಲ್ಲಿ ತೊಡಗಿಕೊಂಡಿದ್ದಾರೆ. ತಮ್ಮ ಮಗುವನ್ನು ಅವರು ಸಂಬಂಧಿಕರ ಮನೆಯಲ್ಲಿ ಬಿಟ್ಟಿದ್ದಾರೆ. "ಪಿಪಿಇ ಕಿಟ್ ಧರಿಸಿ ಸ್ವಲ್ಪ ಹೊತ್ತು ಇರಿಸುಮುರಿಸು ಆಗುತ್ತದೆ. ಬೆವರು ಮೈಯಿಂದ ಇಳಿಯವುದು ಅರಿವಿಗೆ ಬರುತ್ತದೆ. ಆದರೆ ಶುಶ್ರೂಷೆಗೆ ವಾರ್ಡ್‌ಗೆ ಹೋದ ತಕ್ಷಣ ವೈಯಕ್ತಿಕ ವಿಚಾರಗಳು ಮನಸ್ಸಿನಿಂದ ಮಾಯವಾಗುತ್ತವೆ. ಸೋಂಕಿತರು ಆದಷ್ಟು ಬೇಗ ಗುಣಮುಖರಾಗಬೇಕು ಎನ್ನುವ ಅಂಶವಷ್ಟೇ ಉಳಿದುದನ್ನೆಲ್ಲ ಮರೆಸುತ್ತದೋ ಏನೋ" ಎನ್ನುತ್ತಾರೆ ಮಹಾಲಕ್ಷ್ಮಿ.

ದಾದಿಯರ ಕಷ್ಟ ಸುಖ ಕೇಳುವ ಸಾರ್ವಜನಿಕರು ಕೊರೊನಾ ಸಂದರ್ಭದಲ್ಲಿ ಅವರಿಗೆ ಮಾಡಬಹುದಾದ ನೆರವು ಒಂದೇ. ಅದು ಸಾಧ್ಯವಾದಷ್ಟೂ ಮನೆಯಲ್ಲಿಯೇ ಇರುವುದು ಎನ್ನುತ್ತಾರೆ ಚೇತನಾ ಗ್ಲಾಡಿಸ್. "ಅಂಗಡಿ, ರಸ್ತೆ–ಬೀದಿ ಎಲ್ಲಿಯೇ ಆಗಲಿ, ವೈರಸ್ ಇರಬಹುದೇನೋ ಎಂಬ ಎಚ್ಚರಿಕೆ, ಜಾಗೃತಿಯಿಂದ ಇರುವುದು ಮುಖ್ಯ. ಮುನ್ನೆಚ್ಚರಿಕೆಯಿಂದ ಸೋಂಕಿತರ ಸಂಖ್ಯೆಯನ್ನು ನಿಯಂತ್ರಣದಲ್ಲಿ ಇಡಬಹುದು. ಸೋಂಕಿತರ ಸಂಖ್ಯೆ ಕಡಿಮೆಯಾದಷ್ಟೂ ಚಿಕಿತ್ಸೆಯ ಗುಣಮಟ್ಟ ಚೆನ್ನಾಗಿರುತ್ತದೆ. ಆದ್ದರಿಂದ ದಯವಿಟ್ಟು ಮನೆಯಲ್ಲಿರಿ" ಎನ್ನುತ್ತಾರೆ ಚೇತನಾ. ಮಂಗಳೂರಿನಲ್ಲಿ ಇತ್ತೀಚೆಗೆ ಕೊರೊನಾ ಸೋಂಕಿನಿಂದ ಮೃತಪಟ್ಟವರ ಶವ ಸಂಸ್ಕಾರಕ್ಕೆ ಅಡ್ಡಿಯಾದ ಬಗ್ಗೆ ಮಾತನಾಡಿದ ಅವರು, "ಶವದಿಂದ ಸೋಂಕು ಹರಡುವುದಿಲ್ಲ. ಶವವನ್ನು ದಹನ ಮಾಡುವುದರಿಂದ ಯಾವ ವೈರಸ್ ಕೂಡ ಉಳಿಯುವುದಿಲ್ಲ. ಸಂಬಂಧಿಕರನ್ನು ಕಳಕೊಂಡವರಿಗೆ ಇನ್ನಷ್ಟು ನೋವು, ಅವಮಾನ ಮಾಡುವುದು ಸರಿಯಲ್ಲ" ಎಂದು ಜನರಲ್ಲಿ ಮನವಿ ಮಾಡಿಕೊಂಡರು.

ದಾದಿಯರ ಸೇವಾಮನೋಭಾವ ಹಾಗೂ ವೃತ್ತಿಪರತೆಯನ್ನು ಇಡೀ ವಿಶ್ವ ಕೊಂಡಾಡುತ್ತದೆ. ಆದರೆ, ಸೌಲಭ್ಯಗಳ ವಿಷಯಕ್ಕೆ ಬಂದಾಗ ಅವರ ಬದುಕು ಅಷ್ಟೇನೂ ಸುಖಕರವಲ್ಲ. ಬಹುಸಂಖ್ಯೆಯ ದಾದಿಯರನ್ನು ಕಡಿಮೆ ಸಂಬಳಕ್ಕೆ ದುಡಿಸಿಕೊಳ್ಳಲಾಗುತ್ತದೆ. ಕೆಲಸ ಮಾಡುವ ಕೆಲವು ಕಡೆಗಳಲ್ಲಿ ಮೂಲಭೂತ ಸೌಕರ್ಯಗಳೂ ಅಷ್ಟಕ್ಕಷ್ಟೇ. ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಅವಿಶ್ರಾಂತವಾಗಿ ದುಡಿಯುತ್ತಿರುವ ದಾದಿಯಮ್ಮಂದಿರಿಗೆ ಸಮಾಜ ಋಣಿಯಾಗಿರಬೇಕು.

ಪ್ರತಿಕ್ರಿಯಿಸಿ: feedback@sudha.co.in